ಅನ್ಯಾಯವನ್ನು ಮಾಡಿದರೆ ಅದು ಸರಿಯಾದಂಥ ಕ್ರಮ ಅಲ್ಲ. ಕೂಡಲೇ ಆ ಹಿಂದುಳಿದ ರೈತರು ಸಹ ನೀರನ್ನು ಪಡೆಯುವಂಥ ವ್ಯವಸ್ಥೆ ಆಗಬೇಕು. ಅದಕ್ಕೆ ಸರ್ಕಾರ ಆದ್ಯತೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇನ್ನು ಪೊಲೀಸ್ ವ್ಯವಸ್ಥೆ ಬಗ್ಗೆ ಒಂದು ಮಾತನ್ನು ಹೇಳಬೇಕು ಎಂದರೆ . . . . .

ಅಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ. ಆಗಲೇ ಹದಿನಾರು ನಿಮಿಷ ಆಯಿತು. ಇದೇ ತರಹ ಆದರೆ ಹೊಸ ಸದಸ್ಯರಿಗೆ ಯಾರಿಗೆ ಅವಕಾಶ ಕೊಡುವುದು? ನಿಮ್ಮ ನಾಯಕರು ಇಲ್ಲಿ ಹೇಳುತ್ತಲೇ ಇರುತ್ತಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಓಲೆಕಾರ್ ನೆಹರೂ ಚೆನ್ನಬಸಪ್ಪ:– ಕೊನೆಯ ಮಾತನ್ನು ಹೇಳಿಬಿಡುತ್ತೇನೆ.

ಅಧ್ಯಕ್ಷರು:– ಬೇರೆಯವರು ಮಾತನಾಡಬಾರದೇನು? ನೀವು ಮಾತನಾಡಿದ ಮೇಲೆ ಅದು ಮುಕ್ತಾಯವಾಗಬೇಕಾ?

ಶ್ರೀ ಓಲೆಕಾರ್ ನೆಹರೂ ಚೆನ್ನಬಸಪ್ಪ:– ಕೇವಲ ಸುಳ್ಳು ಕೇಸುಗಳನ್ನು ಹಾಕತಕ್ಕಂಥ ವ್ಯವಸ್ಥೆ ಈ ರಾಜ್ಯದಲ್ಲಿ ಆಗಿದೆ. ಇವತ್ತು ಏನಾಗಿದೆ ಎಂದರೆ ಅನೇಕ ಕೇಸುಗಳನ್ನು ರೈತರ ಮೇಲೆ ಹಾಕಿದ್ದಾರೆ, ವಿದ್ಯಾರ್ಥಿಗಳ ಮೇಲೆ ಹಾಕಿದ್ದಾರೆ. ಆದರೆ ನಿಜವಾದ ಕೇಸುಗಳ ಬಗ್ಗೆ ಪೊಲೀಸರು ಕೋರ್ಟಿಗೆ ಚಾರ್ಜ್‌ಶೀಟ್ ಹಾಕುವುದಕ್ಕೆ ತಯಾರಿಲ್ಲ. ಅದರ ಬಗ್ಗೆ ಅವರು ಮೀನಾವೇಷ ಎಣಿಸುವಂಥಾದ್ದು ಇದೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರುವಂಥ ಕಾಟೇನಹಳ್ಳಿ ಗ್ರಾಮದಲ್ಲಿ ಇವತ್ತು ಪರಿಶಿಷ್ಟ ವರ್ಗದ ಒಬ್ಬ ಮಹಿಳೆಯ ಕೊಲೆಯಾಗಿದೆ. ಕೊಲೆಯಾಗಿರುವಂಥ ಸಂದರ್ಭದಲ್ಲಿ ಇವತ್ತಿನದಿವಸ ಪೊಲೀಸರು ಅದನ್ನು 307ರ ಮೇಲೆ ಕೇಸನ್ನು ದಾಖಲು ಮಾಡಿಕೊಂಡಿದ್ದಾರೆ. ಪುನಃ ಆಸ್ಪತ್ರೆಯಲ್ಲಿ ಆ ಮಹಿಳೆ ಸತ್ತು ಹೋದರೆ ಅದನ್ನು 302ಕ್ಕೆ ಕನ್ವರ್ಟ್ ಮಾಡಿಕೊಂಡಿಲ್ಲ. ಕಾರಣವೇನೆಂದರೆ ಹಣದ ಅಮಿಷದಿಂದ, ಹಣವನ್ನು ಪಡೆದು ಆ ಕೇಸನ್ನು ಮುಗಿಸಲಿಕ್ಕೆ ಏನು ಮಾಡಿದ್ದಾರೆ ಎಂದರೆ, ಅಲ್ಲಿಯ ವೈದ್ಯಾಧಿಕಾರಿಗಳೂ ಸಹಿತ ಇವತ್ತು ಆ ಆಸ್ಪತ್ರೆಯಲ್ಲಿ ಸತ್ತಂಥ ಮಹಿಳೆ ಬಗ್ಗೆ ಅದು ಸಹಜ ಸಾವು ಎಂದು ಹೇಳಿ ದೃಢೀಕರಣ ಪತ್ರವನ್ನು ಕೊಟ್ಟಿದ್ದಾರೆ. ಇಂತಹ ಒಂದು ಅವ್ಯವಸ್ಥೆ ಪೊಲೀಸ್ ಇಲಾಖೆಯಲ್ಲಿ ಆಗಿದೆ. ಇದರಿಂದ ಅನೇಕ ಸಮಸ್ಯೆಗಳು ಗ್ರಾಮೀಣ ಪ್ರದೇಶಗಳಲ್ಲಿ ಇವತ್ತು ಉದ್ಭವವಾಗುತ್ತವೆ. ಈ ನಿಟ್ಟಿನಲ್ಲಿ ಸರ್ಕಾರ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕು, ಹೆಚ್ಚಿನ ಗಮನವನ್ನು ಹರಿಸಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

9 ಪ್ರಕಟಣೆ

6) ಮಾನ್ಯ ಸಕ್ಕರೆ ಸಚಿವರಿಂದ ಮಾನ್ಯ ಸದಸ್ಯರುಗಳಿಗೆ ಭೋಜನ ಕೂಟದ ಏರ್ಪಾಡು

ಅಧ್ಯಕ್ಷರು:– ಈಗ ಒಂದು ಪ್ರಕಟಣೆ. ಮಾನ್ಯ ಸಕ್ಕರೆ ಸಚಿವರಾಗಿರತಕ್ಕಂಥ ಶ್ರೀಅಮರೇಗೌಡರು ಮಾನ್ಯ ಸದಸ್ಯರುಗಳಿಗೆ ಬಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಿದ್ದಾರೆ. ಅದಕ್ಕೆ ಎಲ್ಲಾ ಮಾನ್ಯ ಸದಸ್ಯರು ದಯಮಾಡಿಸಬೇಕೆಂದು ಅವರು ವಿನಂತಿ ಮಾಡಿದ್ದಾರೆ. ಈಗ ಸದನವನ್ನು ಮಧ್ಯಾಹ್ನ 2–40ರ ವರೆಗೆ ಮುಂದೂಡಿದ್ದೇನೆ.